# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – 570 006**

**ಅಧ್ಯಯನ ಸಾಮಗ್ರಿ ವಿಭಾಗ**

---

**ಸಂಖ್ಯೆ:** ಕರಾಮುವಿ/ಅಸಾವಿ/08-75/2026-27 **ದಿನಾಂಕ:** 21-05-2026

## ಬಾಕ್ಸ್ ಟೆಂಡರ್ ಪ್ರಕಟಣೆ

**ವಿಷಯ:** ಕರಾಮುವಿ ನಿಲಯದ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ ಗುರುತಿನ ಕಾರ್ಡ್‌ಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ ಬಾಕ್ಸ್ ಟೆಂಡರ್ ಮೂಲಕ ದರಪಟ್ಟಿಯನ್ನು ಆಹ್ವಾನಿಸಿರುವ ಬಗೆಗೆ.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 20.05.2026 ಕಂಡಿಕೆ – 06.

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಕವಚವನ್ನೊಳಗೊಂಡ 20 (ಇಪ್ಪತ್ತು) ವಿವಿಧ ವರ್ಣಗಳಲ್ಲಿ ಗುರುತಿನ ಕಾರ್ಡ್‌ಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಅಂದಾಜು ಮೊತ್ತ **ರೂ. 5,00,000/- ಲಕ್ಷ (ರೂಪಾಯಿ ಐದು ಲಕ್ಷ ಮಾತ್ರ)** ಗಳಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಸ್ಪೆಸಿಫಿಕೇಷನ್ಸ್, ನಿಯಮ ಮತ್ತು ಷರತ್ತುಗಳು ಈ ಕೆಳಕಂಡಂತಿವೆ:

**Specifications:**

- ಗುರುತಿನ ಕಾರ್ಡ್ (ID Card) ಗಳನ್ನು, 20 ವಿವಿಧ ವರ್ಣಗಳಲ್ಲಿ, 300 GSM ಕಾರ್ಡ್ (Card) ಅನ್ನು ಉಪಯೋಗಿಸಿ ಮುದ್ರಿಸಬೇಕಾಗುತ್ತದೆ.
- ಪ್ರತಿಯೊಂದು ಗುರುತಿನ ಕಾರ್ಡ್‌ಗಳನ್ನು 14 x 8.5 ಸೆಂ.ಮೀ ಅಳತೆಯಲ್ಲಿ ವ್ಯತ್ಯಾಸವಿಲ್ಲದಂತೆ ಸಿದ್ಧಪಡಿಸಬೇಕಾಗುತ್ತದೆ.
- 8mm ದಪ್ಪದ, ಉತ್ತಮ ಗುಣಮಟ್ಟದ ಪ್ಲಾಸ್ಟಿಕ್ ಪಾರದರ್ಶಕ ಕವರ್‌ಗಳು (Pouch) ಗುರುತಿನ ಕಾರ್ಡ್‌ಗೆ ಹೊಂದಿಕೊಳ್ಳುವಂತೆ ಇರತಕ್ಕದ್ದು.
- ಪ್ರತಿ ಗುರುತಿನ ಕಾರ್ಡ್‌ಗಳಲ್ಲಿಯೂ ವಿಶ್ವವಿದ್ಯಾನಿಲಯವು ಒದಗಿಸುವ ಮಾಹಿತಿಯನ್ನು ಕಪ್ಪು ವರ್ಣಗಳಲ್ಲಿ ಮುದ್ರಿಸಬೇಕಾಗುತ್ತದೆ.
- ಈ ಮೇಲ್ಕಂಡ Specification ನಂತೆ ಒಂದು ಗುರುತಿನ ಕಾರ್ಡ್‌ನ್ನು (Pouch ಸೇರಿದಂತೆ) ಮುದ್ರಿಸಿ ಸರಬರಾಜು ಮಾಡಲು ತಗಲುವ (ಎಲ್ಲಾ ತೆರಿಗೆ ಸೇರಿದಂತೆ) ದರವನ್ನು ಸೂಚಿಸತಕ್ಕದ್ದು.
- ಒಟ್ಟು **68,200 (ಅರವತ್ತೆಂಟು ಸಾವಿರದ ಎರಡು ನೂರು ಮಾತ್ರ)** ಗುರುತಿನ ಕಾರ್ಡ್‌ಗಳನ್ನು ಮುದ್ರಿಸಿ ವಿ.ವಿ. ನಿಲಯದ ಕೇಂದ್ರ ಕಚೇರಿಗೆ ಸ್ವಂತ ಖರ್ಚಿನಲ್ಲಿ ನಿಗಧಿತ ವೇಳೆಗೆ ಸರಬರಾಜು ಮಾಡಬೇಕಾಗಿರುತ್ತದೆ.
- ಮೇಲ್ಕಂಡ ಮಾದರಿಯಲ್ಲಿ ತಮ್ಮ ಸಂಸ್ಥೆಯ ಮುಖಪತ್ರ (ಲೆಟರ್‌ಹೆಡ್)ದಲ್ಲಿ ದರವನ್ನು ನಮೂದಿಸಿ (ಎಲ್ಲಾ ತೆರಿಗೆಗಳೂ ಒಳಗೊಂಡಂತೆ) ಮೊಹರು ಮಾಡಿದ ಲಕೋಟೆಯ ಮೇಲೆ "ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಕವಚವನ್ನೊಳಗೊಂಡ ಗುರುತಿನ ಕಾರ್ಡ್‌ಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧದ ದರಪಟ್ಟಿ" ಎಂಬುದಾಗಿ ಶೀರ್ಷಿಕೆಯನ್ನು ಕಡ್ಡಾಯವಾಗಿ ಬರೆದು, ಕುಲಸಚಿವರ ಕಛೇರಿಯಲ್ಲಿ ಇಡಲಾಗಿರುವ ಬಾಕ್ಸ್‌ನಲ್ಲಿ ದಿನಾಂಕ: 01-06-26 ರ ಸಂಜೆ 5.00 ಗಂಟೆಯ ಒಳಗಾಗಿ ಹಾಕುವುದು.

**ದರಪಟ್ಟಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು, ತಪ್ಪಿದ್ದಲ್ಲಿ, ಅಂತಹ ದರಪಟ್ಟಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು.**

1. ಟೆಂಡರ್‌ನ ಒಟ್ಟಾರೆ ಮೊತ್ತಕ್ಕೆ ಶೇಕಡ 2.5 ರ ಇ.ಎಂ.ಡಿ. ಮೊತ್ತ ರೂ. 12,500/- ಗಳ ಡಿ.ಡಿ. ಯನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006" ಇವರ ಹೆಸರಿನಲ್ಲಿ ಸಲ್ಲಿಸುವುದು.
2. ಜಿ.ಎಸ್.ಟಿ. ನೋಂದಣಿದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸಲು ಅರ್ಹರಾಗಿದ್ದು, ದರಪಟ್ಟಿಯೊಂದಿಗೆ ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು.
3. ಪಾನ್ ಕಾರ್ಡ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ನಿಯಮ ಮತ್ತು ಷರತ್ತುಗಳು:

1. ಮುದ್ರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣ ಕ್ರಮದ ಗುರುತಿನ ಕಾರ್ಡ್‌ಗಳ ಕರಡು (ಡೆಮಿ) ಮತ್ತು ಸಾಫ್ಟ್ ಕಾಪಿಯನ್ನು ವಿಶ್ವವಿದ್ಯಾನಿಲಯವೇ ಕಾರ್ಯಾದೇಶದೊಂದಿಗೆ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಗುರುತಿನ ಕಾರ್ಡ್‌ಗಳನ್ನು ಮುದ್ರಣ ಮಾಡಿ ಸರಬರಾಜು ಮಾಡಬೇಕಾಗಿರುತ್ತದೆ (ಅಂತಿಮ ಮುದ್ರಣಕ್ಕೆ ಮುಂಚೆ ಒಂದು ಪ್ರತಿಯ ಡೆಮಿಯನ್ನು ನೀಡಿ ಸಂಬಂಧಪಟ್ಟ ವಿಭಾಗದಿಂದ ಅನುಮೋದನೆ ಪಡೆದು ಮುದ್ರಣಕ್ಕೆ ಕ್ರಮವಹಿಸುವುದು ಕಡ್ಡಾಯವಾಗಿರುತ್ತದೆ).
2. ಒಂದು ಗುರುತಿನ ಕಾರ್ಡ್‌ನ ಮುದ್ರಣಕ್ಕೆ ಕನಿಷ್ಠ ದರವನ್ನು ನಮೂದಿಸುವ ಸಂಸ್ಥೆಯವರನ್ನು ಎಲ್–1 ಬಿಡ್‌ದಾರರೆಂದು ಪರಿಗಣಿಸಲಾಗುವುದು.
3. ಎಲ್–1 ದರವು 'ಕಾರ್ಯಾದೇಶ' ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೂ ಚಾಲ್ತಿಯಲ್ಲಿರುತ್ತದೆ. ಈ ಸಂಬಂಧ ಎಲ್–1 ಬಿಡ್‌ದಾರರು ವಿಶ್ವವಿದ್ಯಾನಿಲಯದೊಂದಿಗೆ ಒಂದು ವರ್ಷದವರೆಗೆ 'ದರ ಕರಾರು ಒಪ್ಪಂದ'ವನ್ನು ಮಾಡಿಕೊಳ್ಳಬೇಕಾಗುತ್ತದೆ. ಅದರಂತೆ ಬೇಡಿಕೆಯನುಸಾರ ಎಲ್–1 ದರದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಕವಚವನ್ನೊಳಗೊಂಡ ಗುರುತಿನ ಕಾರ್ಡ್‌ಗಳನ್ನು ಮುದ್ರಣ ಮಾಡಿ ಸರಬರಾಜು ಮಾಡಬೇಕಾಗುತ್ತದೆ.
4. ಎಲ್–1 ಬಿಡ್‌ದಾರರು ದರ ಕರಾರು ಒಪ್ಪಂದದ ಸಮಯದಲ್ಲಿ ಟೆಂಡರ್‌ನ ಒಟ್ಟಾರೆ ಮೌಲ್ಯಕ್ಕೆ ಭದ್ರತಾ ಠೇವಣಿಯಾಗಿ (Security Deposit) ಶೇಕಡ 5ರ ಮೊತ್ತದ ಡಿ.ಡಿ. ಯನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006" ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.
5. ಟೆಂಡರ್‌ನಲ್ಲಿ ಸಲ್ಲಿಕೆಯಾಗುವ ದರಪಟ್ಟಿಗಳಲ್ಲಿ ಎರಡು ಸಂಸ್ಥೆಗಳು ಒಂದೇ ದರಗಳನ್ನು ನಮೂದಿಸಿದ್ದಲ್ಲಿ, ಸದರಿ ಸಂಸ್ಥೆಗಳ ಹಣಕಾಸು ವಹಿವಾಟುಗಳನ್ನು ಪರಿಗಣಿಸಿ, ಕ್ರಮವಹಿಸಲಾಗುತ್ತದೆ.
6. ಯಾವುದೇ ಕಾರಣ ನೀಡದೇ 'ದರಪಟ್ಟಿ'ಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.
7. ದರಪಟ್ಟಿಗೆ ಸಂಬಂಧಿಸಿದಂತೆ ಯಾವುದಾದರೂ ತಕರಾರು ಉದ್ಭವಿಸಿದರೆ, ವ್ಯಾಜ್ಯವು ಮೈಸೂರು ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತದೆ.

ಆದೇಶದ ಮೇರೆಗೆ,

**ಕುಲಸಚಿವ**

ಪ್ರತಿ:

1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
4. ಡಾ. ನವೀನ್‌ಕುಮಾರ್ ಸಿ.ಜಿ. ನೋಡೆಲ್ ಅಧಿಕಾರಿ, ವೆಬ್‌ಸೈಟ್, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು – **ಸದರಿ ಪ್ರಕಟಣೆಯನ್ನು ವಿ.ವಿ. ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
5. ಕಚೇರಿ ಪ್ರತಿ.